ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು



ಶ್ರೀ ನರಹರಿ ದಾಸರು
ರಚಿಸಿದ ದೇವರನಾಮಗಳು

Typed by:

'Jagannatha Kesava' Sathyanarayanan
8904458276. haridasa.vijayam@gmail.com
jagannathakesava.blogspot.com

For more details:

G.Janardhanan - SudhaParimala
Gopala Niwas, Plot No.11, Raja Nagar
Medavakkam, Chennai 600100
Mailid : gjanar1958@gmail.com
Mobile: 97107 10456. 044-22772553

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ನರಹರಿ ನಾಥನ ಹಾಡು - ಲಾಲಿ

ಯಶೋದೆ ಕಂದನೆತ್ತಿ
ತೊಟ್ಟಿಲೊಳು ಲೋಕದ ಶಿಶುವನು
ಶ್ರೀಕಾಂತನ ಮಲಗಿ ತೂಗಿದಳು
ಅನೇಕ ಪರಿಯಲಿ ಪಾಡುತ್ತಾ (ಯಶೋದೆ)

ಎನ್ನ ಸೊಲ್ವೇನಡಿ ಯಶೋದಾ
ಉನ್ ಮಗನ್ ಚಿನ್ನ ಬಾಲಕನಲ್ಲ
ಪೆಣ್ಗಳ್ಳೈ ಕೂಟ್ಟಿಕ್ ಕೊಂಡು

ಗೋಪಮ್ಮಾ ನೀ ಕೊಡುಕು
ಚೇಸೇತಿ ನಾಪಿರಚ್ಚನು ನಿನಗಾ
ಕಾಪುರಮುಯುಂಡ ಅಮ್ಮಾ
ಈ ವಟು ಈಪೊತ್ತು ವಿನಕು ಸಾಲು (ಯಶೋದೆ)

ಹೇಮಾರ ಕೃಷ್ಣ ತುಫ್ವೇ ಹಿಂಸೇತು
ತೆಯ್ಯುಟ ಮಾಟಕಲಾಟನೇ
ಸ್ಮಾರ ಹಿಗ್ಗೆ ತರಾಯಾ
ಕೃಷ್ಣಾಚ ಕಲ್ಕೀಚ ಯಾರ ಮಾಹಿ (ಯಶೋದೆ)

ನಿನ್ನ ಮಗ ಬಲು ದುಷ್ಟನೇ ಉದಯದಲಿ
ನಿನ್ನೆ ನಂಮ ಮಾಯೆ
ಬೆಣ್ಣೆ ಎಮಾಸವಿಲ್ಲಾದಿಂದು
ಬಾಲಯರ ಪೆದರಿಸದ
ದುಡುಕಳಿನ್ನಾದರೇ (ಯಶೋದೆ)

ಚೆಲುಮಾಡಿ ಅನದೀರಣ್ಣಾ
ನಿನಗೆ ನಾನು ನೊಗ್ರೆತೊಲು ವೆಣ್ಣೆ ಕೊಡುವೇ
ವಲನೇರ ದ್ರಿಷ್ಟಿ ತಾಕಿಹೊಳವೋ
ತಾಮರೈ ಮುಖವದು ತೋರೋ (ಯಶೋದೆ)

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ಕುಮಾರ ಕೋಕಿ ಅಷ್ಟದಿರೋ
ವರುಗೈಯಾಳ್ಗಳು ದೂರುವರೋ
ದಾರೆಯ ನಿನಗೆದರು ತಾರೋ
ನರಹರಿ ಈವೈಳಗೆ ಆಡುತಿರೇ (ಯಶೋದೆ)

***

ಪಾಹಿ ರಾಮಚಂದ್ರಾ ಕಲ್ಯಾಣ ಸಾಂದ್ರಾ ||ಪ

ಪಾಹಿ ರಾಮತವ ಪಾದನ ತಂ ಮೇ ದೇಹಿ
ಭಕ್ತಿಮಯ ದೇವ ಪದೇ ಪರಿ ||ಅಪ

ಕೋಸಲಾದಿ ರಾಜಾ ಲೋಕೈಕ ಭೇಜಾ
ದಾಸನಾಗಿ ಪೂಜಾ ಭೂ ಸುತಾಕ್ಷಿ
ಸುಖ ಪೂರಕ ವಿಗ್ರಹ
ವಾಸವಾದಿ ಸಮ ವಾಯು ಅನುಗ್ರಹ (ಪಾಹಿ)

ನಂದಗೋಪ ಬಾಲಾ
ಆನಂದಶೀಲಾ ಸಂಗೀತ ಲೋಲಾ
ಮಂದಹಾಸ ರಸ ನಂದಿತ ಭೇಷ್ಮಕರಿ
ವಿಂದ್ಯ ವೇದ್ಯಗುಣ
ಅರವಿಂದ್ಯ ನಮೋಸ್ತುತೇ (ಪಾಹಿ)

ವೇದ ಸಾರೋಧ್ಧಾರಾ ವ್ಯಾಸಾವತಾರಾ
ಸಾದು ಚಿಂತ್ಯಕಾರಾ ಮೋದ ತೀರ್ಥ ಮುನಿ
ಬೋದಕ ರಾಜಿತ ಸ್ರೀದ ನಾಮಗಿರಿ
ಕಿರೀಟನ ನರಹರಿ (ಪಾಹಿ)

***

ಪದ್ಯ

ನಂದಕುಮಾರಾಯ ನವನೀತಚೋರಾಯ
ಸುಂದರಕಾರಾಯ ಸುತಕರಾಯ

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ಸುರಪ್ರಕಾಶಾಯ ಶ್ರೀರುಕ್ಮಿಣೀಶಾಯ
ಘೋರಾರಿ ನಾಶಾಯ ಕುರುವಶಾಯ
ಅರವಿಂದ ನಯನಾಯ ವರಕುಂದ ರದನಾಯ
ಸರದಿಂದು ವದನಾಯ ಸುರತನಾಯ

ಕಮಲ ಚರಣಾಯ ಕಲ್ಯಾಣ ಕಾರಣಾಯ
ಮೌನಿ ವಿನುತಾಯ ಮಹನೀಯ ಮಾನಿತಾಯ
ಯಾದವಾಯ ಸ್ತುತೇ ನಮೋ ಮಾಧವಾಯ
ನಾಮಗಿರೀಶಾಯ ಮೇ ಪ್ರಾಣ ವಲ್ಲಭಾಯ

***

ಪದ್ಯ

ದೇವಕಿ ವರಪುತ್ರ ದೇವ ಸನ್ನುತಿ ಪಾತ್ರ
ಸುಜನ ಸುರಮಿತ್ರ ಸುಖ ಶರೀಂದ್ರಾ
ಗೋಕುಲ ಸಂಚಾರ ಗೋವರ್ಧನೋದ್ಧಾರ
ಗೋಪಿಕ ಜನವಾರ ಕುಭ ವಿಹಾರ
ಪತಿತಪಾವನ ಪಾದ ರತಜನಾರ್ಪ್ಪಿತ ಮೋದ
ವೇಣುನಾದ ವಿನೋದ ವಿದಿತ ಬೇದಾ
ಕಾಸಾದಿ ತಿರಿಪಿಟಿ ಕಲುಷ ಸಂಗ ವಿರಾಮ
ಸೌಂದರ್ಯ ಜಿತಕಾಮ ಸತಬಿರಾಮ

ಸಂತತಂ ನೌಮಿತವ ಗುಣಾನ್ ಸ್ಮರಾಮಿ
ಮಾರಕೇಳಿ ಸುಖಂ ದೇಹಿ ಮಾಂ ಪ್ರಬಾಶಿ
ಸೂರಿನುತಲೆ ಸುಖಲೀಲಾ ಸುಗುಣಶೀಲಾ
ನಾಮಗಿರಿ ಲೋಲ ನಂದಬಾಲಾ ನಂದಬಾಲಾ

***

ರಾಕ: ಮೋಹನ

ಕೃಷ್ಣ ಸಾರದೇ ಕ್ರುಪಾಪಿ ಮಾನಿದ
ಕೃಷ್ಣ ಸಕ್ತ ಸುಕುಮಾರ ಜಯ ಜಯ

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ಕೃಷ್ಣಾ ಪಾಹಿ ಗೋಪಾಲ ಕೃಷ್ಣಾ

ಕೃಷ್ಣಾ ಕಲಸ ಜಲದಿ ಸಮನಾ
ನಿಜ ಕೋಮಲ ತನುಜಿತ ಮದನಾ
ಸಾರದ ಜಲಜ ವೈರಿ ವದನಾ
ಸಾರಸ ದಳ ವಿಶಾಲ ಗಮನಾ
ಮುಕ್ತಾವಳಿ ಸಮಾನಾ ರತನಾ
ಯದುಕುಲ ತಿಲಕಾ ಶ್ರೀ ಯಶೋದಾಬ್ದ
ಲಾಲನಾ ನಳಿನ ಜಾತವಾದ ಗೀತ
ವಿವಸ ಭೂತ ಗೋಕುಲ ಕಲುಷದೂತ
ಪಾರಿಜತ ಕಸಪರ ಕಲ ವಿಧಾರ
ಕೋಪದಾರ ಗನಕುಚ ಕಲಸಪಾರ
ಕೃತವಿಹಾರ ಕರಯುಗ ಸಲಿತಹಾರ
ತರಳವಾರ ದದಿಘೃತ ಕಲಶ ಚೋರ
ಮೇರುದೀರ ಜಯ ಜಯ ಕೃಷ್ಣ ಕಲಶ
ಗಂಭೀರ ಜಯ ಜಯ ಕೃಷ್ಣಾ (ಪಾಹಿ)

ಕೃಷ್ಣಾ ಮುರಮದ ಘನ ಬವನಾ
ಭೀಷ್ಮಕ ನರ ಪಸುದೋದ್ ಬವನಾ
ನಿರ್ಜರ ದರಣಿ ನಾನಾ ನಯನಾ
ಸತ್ಯ ಪರಮಹರುಷ ಮನನಾ
ಬದ್ರಾ ಸುರತ ನಿಹಿತ ಮನನಾ ನೀಲಾ
ತರಮನಂತ ಮಾದುರ್ಯ ಸೇವನರ
ವರದಮಾಲ ಜಾಲ ನೀಲ ಭವಮಯ
ಹರನ ಲೀಲಕಾಮ ಬಾಲ
ಸುಖವನ ಸರಸಪಾಲ ರಾಜಪಾಲ
ಸಲಿಲಲಿ ಹರಣ ಲೋಲ
ಯುವತಿ ಚೇಲ ತಸ್ಕರ ಚರಣ ಸಂಗ
ದಾಕ್ರ ರಂಗ ಕವಿಜನ ದುರಿತ ಬಂಗ
ಶುಬತರಂಗ ಮುನಿಹೃತ್ ಪರಮ ರಂಗ
ಮದಮತಂಗ ಸುಮನಸ ಸರವಿಹಂಗ
ಪತುರಂಗ ಜಯಜಯ ಕೃಷ್ಣಾ

ಚರವಿಹಂಗ ವಿಪತು ರಂಗ

ಜಯಜಯ ಕೃಷ್ಣಾ ||

ಕೃಷ್ಣಾ ಅನುಪಮ ಮಣಿಕಿರಣಾ

ದುಜ್ವಲ ಕಗ್ಗೈ ಮಯಾಭರಣಾ

ಗಾಳಿಯ ಗನಮದ ಪರಿಹರಣಾ

ಬ್ರುಂದಾ ವನತಲ ಸಂಚರಣಾ

ಮೇವ ಸಮನಸ್ರಮಾ ರಮಣಾ

ಜನ ಮೋಹನಾಮ್ರುದೂರು

ಮಕರಂದ ಬಾಷಣ ದನುಜಶಿಕ್ಷ

ಜ್ಯಾತಿತಕ್ಷ ಕುಂದಿದಯ್ಯೆ ರಕ್ಷಾ ಕಾಕ

ಪಕ್ಷ ದರಬುದ ಮದುಜಪಕ್ಷ ಕಲ್ಪ

ವೃಕ್ಷ ನಯಿಗಮ ವಿನುತಿಲಕ್ಷ

ಲಕ್ಷ ಲಕ್ಷ ನೂಲಚ ಧನುಗ ಭೀಮ

ಶಯನ ನಾಮ ದಾರಕ ವನುಸಿ

ಸ್ಥೋಮ ಸರ್ವ ಬೌಮ

ರತ ಭೂತನುಗ ಭೀಮ ನರಹರೇ ಮ

ಹೇ ಸುಖ ಜನಕ ನಾಮಗಿರಿ ಕಾಮ

ಜಯಜಯ ಜನಕ ನಾಮಕಿರಿಜ

ಕಾಮ ಜಯಜಯ ಕೃಷ್ಣಾ ಪಾಹಿ

***

ಕರುಣಾಕರ ಕಾಯೋ ಜಯ ಹನುಮಂತನೇ

ಚರಣ ಕಮಲವ ನಾ ನಿನ್ನ ನಂಬಿದೇ (ಕರುಣಾಕರ)

ಅಂಜನಿ ತನಯನೆ ಅಖಿಳಂಕ ಚರಿತನೆ

ಸಂಜೀವಿಯಾ ತಂದ ಸಾದುವೆ

ಒಂದೆ ನಿಮಿಷದಿ ಅಂಬುದಿ ದಾಂಟಿ

ಉಂಗುರವಿತ್ತು ಸೀತೆಗೆ ಮುದದಿಂದಾ

ಆನಂದವಾ ಪದಿಸಿದಿ (ಕರುಣಾಕರ)

ಕುಂತಿ ಸುತ ಬಲವಂತನೆಂದೆನಿಸಿದೆ
ಚಂದದಿ ವೈರಿಯ ಗೆಲಿದನೆ
ಸಂತೋಷದಲಿ ಸಾಂರಾಜ್ಯವನಾಳಿ
ಕರಮುಗಿದು ನಿಂತಾ ಶ್ರೀಮುಖ್ಯಪ್ರಾಣನು (ಕರುಣಾಕರ)

ಮಧ್ವ ಮತವಾ ಸಿದ್ಧಾಂತವಾ
ಮಾಡಿದಿ ವೃತ್ತ ವಲ್ಲಭ ಹರಿ
ನಿತ್ಯನೆ ಬೆಟ್ಟಾ ದೊಡಯಾ
ಶ್ರೀ ನರಹರಿ ಯದುರಾ ನಿಂತು ಕೈ
ಮುಗಿದನೆ ಶ್ರೀ ಮುಖ್ಯ ಪಿರಾಣನು (ಕರುಣಾಕರ)

***

ಸಾಮಜ ಭಯ ಹರ ಸುರ ನಾದಾ
ಸರಸಿಜ ಸಮಮೃದು ಪದ (ಸಾಮಜ)

ಮಾಮು ಮಗದಿ ವಿರಚಿತಮಾ ಮಮಗತಿ
ವಿರಚಿದಿ ಮತಿತ ನಾಮಗಿರಿ ವಿರಚಿತ (ಸಾಮಜ)

ಅರುಣ ಕಿರುಣ ಮದಹರಣ ಮಕುಟ ಮೃಗಹಳ
ತರುಣ ವದನಮುನಿ ಚರಣ ವಿದುರ ಕೃತ
ಕರುಣ ಭವ ಜಲದಿ ತರುಣಿ
ತರುಣ ಸಮರೀ ತರುಣಿ ಜಲದ ರುಚಿ ತನಯುತ ಜಯಜಯಾ (ಸಾಮಜ)

ಸಿಟಿಲ ಕುಟಿಲ ಕಸ ಪಟಲ ತಿಲುಗಹಿತ ಹಾ
ನಟನ ಕನಕಮಯ ಪಡುತರ ಪಣಿಹೃತ ನಟನ
ರುಚಿ ರಮಣಿ ಕಡಿದ ಕರ ವನಿತ ನೀ
ಕಟುಕ ಕಲುಷ ಹೃತಿ ಪಡುತರ ಜಯಜಯ (ಸಾಮಜ)

ಪವನ ಪವನ ಮಿತ ಭುವನ ಸುಬದ ಗುಣದಾ
ಪವನ ಗಹಕ ಮಲಮವತು ತನುಜ ಗಣ ಪವನ ವಿತರನುತ
ಮಲನುತ ನರಹರೇ ನಿ
ಕವನ ವಚನ ತತಿ ಸುವಿದುತ ಜಯಜಯ (ಸಾಮಜ)

***

ರಾಮಾ ಘನಶ್ಯಾಮ ರಿಪು ಭೀಮಾ ಸಲಹೋ
ಸೋಮಾನನ ಕಾಮಾದಪಿ ರಾಮಾ ಸಲಹೋ (ರಾಮಾ)

ದೀರಾ ರಘುವೀರಾ ಸುಕುಮಾರಾದಿ ಸುರಾ
ದೀರಾ ಶಿಖಾ ದೀರಾ ಮಹಾ ದಾರುಣ ದಾರಾ (ರಾಮಾ)

ನೀಲಾಳಕ ಜಾಲ ಸಂಕೃತ ಬಾಲಾ
ಸುಶೀಲಾ ಡೋಲಾಹಿತ ಮನಸಾ
ಕ್ಷಿತಿ ಬಾಲಾ ವಿಲೋಲಾ (ರಾಮಾ)

ದಿನಾರ್ದಿತ ತಾನಾ ಗೃಸಂತಾನನ ಪಹಾರೇ
ಭೂ ನಾಯಕ ಶ್ರೀ ನಾಮಗಿರಿ ನರಹರೆ
ಶ್ರೀ ರಾಮಾ ಘನಶ್ಯಾಮಾ (ರಾಮಾ)

***

ಎತ್ತಿದಳಾರತಿ ಹರಿಗೆ ತಂದು
ಭಕ್ತಿಲಿ ಉಡುಪಿಯ ದೊರೆಗೆ (ಎತ್ತಿ)

ಸೃಷ್ಟಿಯೊಳಧಿಕ ಪ್ರಸಿದ್ಧ
ವಾದಿರುವಂತಾ ಇಷ್ಟಾವರ
ಚಿತ್ತಲ್ಲದೆ ರಹಿತವ ಉಡುಪಿಯ ಕೃಷ್ಣಗೆ (ಎತ್ತಿ)

ಹಟಕದಿಂದಲಿ ನಾಟ ತಂದಾ ಕೃಷ್ಣಾ
ಒಡದು ಗೊಪಿಚಂದನದಿ ನಿಂದಾ
ಗುರುಮಧ್ವ ರಾಯರಿಗೆ ವಲಿದು ನಲಿದು ನಿಂದಾ
ಕಡಕೋಲುತಾನ್ ಪಿಡಿದು ನಿಂದಾ
ಕಡುಬಾಲಕ ಉಡುಪಿಯ ಕೃಷ್ಣಗೆ (ಎತ್ತಿ)

ಪೊರೆವಾ ಕೃಷ್ಣಾ ಜ್ಯಾನಿಗಳ ಮನದಲಿರುವ
ಏನು ಬೇಕಾದರ ವರಗಳ ಕೊಡುವನು
ಜ್ಯಾನ ಭಕ್ತಿ ಕೊಡುವಾ ಮುಕ್ತಿ

ನಾನಾಯುಕ್ತಿ ತೋರುವಾ ಕೃಷ್ಣಗೆ (ಎತ್ತಿ)

ನರಹರಿ ಎನ್ನವನಿವನೆ ಕೃಷ್ಣಾ
ಪರಿಪರಿರೂಪವ ತೋರಿದನೇ ಸ್ಥಿರವಾಗಿ ಉಡುಪಿಯ
ಪುರದಲ್ಲಿ ನೆಲೆಸಿದಾ ಹರುಷದಿಂದಾ ಹರಿ
ಗೋವಿಂದ ಪರಮಾನಂದ ಉಡುಪಿಯ ಕೃಷ್ಣಗೆ (ಎತ್ತಿ)

***

ಮಂಗಳಂ ಶ್ರೀರಂಗ ರಾಜಗೆ
ಭುಜಂಗ ವಿರಚಿತ (ಮಂಗಳಂ)

ಭೂಮಿ ಮಂಡಲ ಕಾಮಿತಾರ್ತ್ತಿತ ಸ್ವಾಮಿ
ನೀ ಸತತಂ ಸೀಮ ವಿಮಲ ಸುಧಾಮ
ವರವಸುದಾಯ ಕಾಯ ಗೇಯ ನಿತಗುಣ (ಮಂಗಳಂ)

ನೀರಜಾಕ್ಷಣ ದೀರಲಕ್ಷಣದಿ ರತಿರಮಣಾ
ಸ್ರುಂಗಾರ ಜಲದರ ಘೋರ ಭವ ಭಯ
ಹಾರ ದೀರದಾರ ನಿತಗುಣ (ಮಂಗಳಂ)

ಅಂಗರುಮಣಿ ರಂಗ ನಾಯಗಿ ಸಂಗ ಲೋಲ ಹರೇ
ಉತ್ತುಂಗ ಶುಭಗುಣ ಸಂಗ ನಾಮಗಿರಿ ರಾಮ ಭೂಮ
ನಾಮ ನರಹರೇ (ಮಂಗಳಂ)

**

ರಾಕ: ಬಿಲಹರಿ

ಕಂದಾ ಬೀದಿಗೆ ಪೋಗಬ್ಯಾಡವೋ ಎನ್ನ ಕಂದಾ (ಪ)

ಕಂದಾ ನಿನ್ನನು ಗೋಪ ಸುಂದರಿಯಾರು ಬೆಣ್ಣೆ
ತಿಂದ ಕಳ್ಳನು ಹೊರಗೆ ಬಂದಾ ರೆಂಬಾರೇ ನಿನ್ನ ||1

ದಿಟ್ಟಮೂರುತಿ ನಿನ್ನ ಪಟ್ಟ ಕುಚಯರು ಕಣ್ಣಿಟ್ಟು
ನೋಡಲು ನಿನ ಧೃಷ್ಟಿ ತಾಕುವ ದೆನ್ನ ||2

ಅಣ್ಣಯ್ಯ ನಿರುವನು ಆಟಪಾಟಗಳಿಂದ
ಕಣ್ಣಾ ಮುಂದಾಡೋ ನೀ ಕದಲದೇ ಎನ್ನ ಮುದ್ದು ||3

ಬಂಗಾರ ರತುನಾದಿ ಸ್ರುಂಗಾರಂಗಳಾ ಮಾಡಿ
ರಂಗ ನಿನ್ನ ನೋಡಿ ಪೊಂಗುತಿಪ್ಪೇನೋ ಎನ್ನ ||4

ಕನಕಾಂಗಿಯರು ಬಂದು ಕರದಪ್ಪಿ ಬೋದಿಸಿ
ಮನವಾ ಬಾರೇ ಹರಿಸಿದಂ ಮನಿಗೆ ವೈವರೋ ಎನ್ನ ||5

ಸರಸಾ ಸಕ್ಕರೆ ಬೆಣ್ಣೆ ಕರದೊಳಗರ್ಪಿಸಿ ಮುದ್ದು
ಸುರಿವರ ಮುಖವ ನೋಡಿ ಸುಖಪದುವೇನೋ ಎನ್ನ ||6

ರಾಗಾ ರಾಗಾದಿ ಅನುರಾಗಾದಿ ನಿನ್ನ ಪಾಡಿ
ಭಾಗವತರಕೂಡ ಬಾ ಎಂದು ಕರಿವೋರು ||7

ಭುವನದವಳ ಕಾಡೋ ಬಲು ಸಂತೋಷವ ನೀಡೋ
ನವ ಮೋಹನಾಂಗಾ ಶ್ರೀನರಹರಿ ದೊರೆ ಎನ್ನ ||8

***

ಕಂದಾ ಬೀದಿಯಲ್ಲಿ ಬಂದಾ ಕಾಣಿರೇ ನಮ್ಮಾ ಎನ್
ಅಂತ ಉಳ್ಳ ಕೂಸು ಇಲ್ಲಿ ಆಡಿ ಬರುವಾರೆಂದು ಕಾಣೇ (ಕಂದಾ)

ಕಾಲುಗಳಿಕೆ ಹೊನ್ನ
ಗೆಜ್ಜೆ ಕಟ್ಟಿ ಇತ್ತನೆ
ಗೆಜ್ಜೆ ಕಟ್ಟಿ ಇತ್ತನೆ ಬಾಲಾ
ಕೈಕಳಿಗೆ ರತ್ನದ ಬಳೆ
ಗಳಾಗಿತ್ತೆ ನಮ್ಮ (ಕಂದಾ)

ಹೆರಳ ಹೆಣದು ಕೆಂಬು
ಹುವಾ ತಿರುಗಿ ಇತ್ತನೆ
ಹುವಾ ತಿರುಗಿ ಇತ್ತನೆ ಬಾಲಾ
ಸುರಳೆಲೆ ನೆತ್ತಿಲಿ ಕಟ್ಟಿ ಆಟಗಳಿಗಿ

ಕೊಟ್ಟೆ ನಮ್ಮ (ಕಂದಾ)

ನೀರಜಾಕ್ಷಾ ನಮ್ಮ ಇಂದಿರಾ ನೀಲ
ವರ್ಣನೇ ಇಂದಿರಾ ನೀಲವರ್ಣನೇ
ನಾರಿಯರಾ ಮೋದಿಸುವ ಮಾರ
ಸುಂದರಾಂಗ ನಮ್ಮ (ಕಂದಾ)

ಪೊಂಗಳನೂದುತಾ ಕೂಸು ಹೊರಟ್ಟು
ಬಂದನೇ ಕೂಸು ಹೊರಟ್ಟು ಬಂದನೇ
ಹೆಂಗಳ ಕಂಡೆನ್ನ ಮಗುವಾ
ಎತ್ತಿ ವೈತರೇಣೋ ಕಾಣೇ (ಕಂದಾ)

ಪೂರ್ಣ ಚಂದ್ರ ಬಿಂಬಚಾರು
ಪೊರಟ್ಟು ಬಂದನೇ ಚಾರು ಪೊರಟ್ಟು
ಬಂದನೇ ಎನ್ನ ಮುದ್ದು
ಶ್ರೀ ನರಹರಿ ಎಲ್ಲಿ ಆಡುತಿರುವೋ ನಮ್ಮ (ಕಂದಾ)

***

ಮಗನ ಚರಿಯವ ಕೇಳಮ್ಮಾ
ಯಶೋದೆ ನಿನ್ನ ಮಗನ ಚರಿಯವ ಕೇಳಮ್ಮಾ ||ಪ

ಮಗನ ಚರಿಯಾವ ಕೇಳಿ ಜಗದೊಳಂ ಮಗು ಬಲು
ಸುಗುಣನೆಂತೆಂ ನೋಡಳಿ ರಗಳೆ ಮಾಡುವಿ ನಿನ್ನ ||ಅಪ

ಸಣ್ಣವರೆಡೆ ನಮ್ಮ ಸದನಗಳಿಗೆ ಬಂದು
ಬೆಣ್ಣೆಯಾ ಕದ್ದು ತಿಂದು ಬೆಕ್ಕಿ ಗಿಟ್ಟನೆ ನಿನ್ನ ||ಮಗನ

ಬಾಲನ ಜಟೆ ಕರು ಬಾಲಕ ಕಟ್ಟಿ ದೊಡ್ಡ
ಗೋವಿನಿನ್ ಕೊಡದನೇ ಕೋಮಳಿ ನಿನ್ನ ಮುದ್ದು ||ಮಗನ

ನೀರೇ ನಿಮಗೆ ಮುದ್ದು ನಿನ್ನ ಮಗನ ಲೂಟಿ
ಊರು ಜನರನೆಲ್ಲಾ ಹೋರುವರಲ್ಲೆ ನಿನ್ನ (ಮಗನ)

ಕೆಟ್ಟ ಕಡದೇ ಗೆಯ್ವರ ದುಷ್ಟನಾ ಒರಳಿಗೆ
ಕಟ್ಟಿ ಹಾಕೆನಲು ನೀ ಸಿಟ್ಟು ಮಾಡುವಿ ನಿನ್ನ (ಮಗನ)

ಕಟ್ಟಿ ಇರುವಾ ಶಿಶು ಕರ್ಣಗಿ ಬಿಟ್ಟದು
ಸಿಟ್ಟನೆ ಚಿರಲು ಕೈ ತಟ್ಟಿ ನಗುವೋ ನಲ್ಲೆ (ಮಗನ)

ಕ್ರೂರ ಕೋಪವ ಬಿಟ್ಟು ಕುವರ ಕಿನ್ನಾದರು
ನಾರಿ ನೀ ಬುದ್ಧಿ ಪೇಳೇ ನರಹರಿ ಮಾತೇ ನಿನ್ನ (ಮಗನ)

***

ಬೇದಿಗೆ ಪೋಗದಿರೋ ಮನೆಯಲಿರೋ (ಬೀದಿಗೆ)

ಚಿನ್ನಿ ಕೆತ್ತರು ಬಂದು ಬೆಣ್ಣೆ
ಕದ್ದಾನೆಂದು ನಿನ್ನನೆ ತೂಗುವರೆ ಎನ್ನಯ್ಯ (ಬೀದಿಗೆ)

ಬಾಲಕರೊಡ ಬಂದು ಬಾಲ ಕುಡಿದಾನೆಂದು
ಬಾಳಾ ಮಾತಾಡುವರೋ ಬಾಲ್ಕೈಯಾ ನೀ (ಬೀದಿಗೆ)

ಮೋಸಕಾರನು ಬಂದು ಮೊಸರು ಚೆಲ್ಲಿದಾನೆಂದು
ದೂಷಿಶಿ ಪೊಯ್ಯುವರೋ ಸುಬ್ಬೈಯಾ ನೀ (ಬೀದಿಗೆ)

ಎನ್ನೆಯ ಚಿನ್ನವೆ ಎನ್ನೈಯಾ ರನ್ನವೆ
ನರಹರಿ ಕಲ್ಪ ತೋರೋ ದೊರೆಯ ನೀ (ಬೀದಿಗೆ)

***

ಎಷ್ಟು ಪ್ರಾರ್ತ್ರಿಸಿ ಕೊಂಬೇನೋ
ರಂಗೈಯಾ ನಿನಗೆ ನಾನು (ಎಷ್ಟು)

ದುಷ್ಟನಾ ಪೆತ್ತಳೆಂದು
ದೂರಲಾರಿರೇ ನೀವು ಅಬ್ಬಾಯಿ
ಅಪವಾದ ತಪ್ಪಿಸಿ ಕೊಳ್ಳೋ ಎಂದು ನಾನ್ (ಎಷ್ಟು)

ಗೊಲ್ಲತ್ತೇರಾ ಮನೆಯಲ್ಲಿ

ಕೊಳ್ಳೇ ಹಿಡದಿಯೆಂದು
ಒಳ್ಳೇ ಮಾತುಗಳಾಡಿ ಗಲ್ಲವ
ಪಿಡಿವರೆಂದು ನಾನ್ (ಎಷ್ಟು)

ನಿನ್ನ ದೂರನು ಕೇಳಿ
ಹುಣ್ಣಾಯಿತೋ ಮನಸು ಎನ್
ಅರಗಿಣಿಯೇ ನೀ ಕಣ್ಣಾ
ಮುನ್ನಾದೋ ಎಂದು ನಾನ್ (ಎಷ್ಟು)

ಭಾನು ನೀರೊಳಕೆನ್ನಾ
ಮಾನಾ ಪೋಗುವದೆಂದು ನಾನಾ
ಬಗೆಯಲ್ಲಿ ಶ್ರೀ ನರಹರಿ
ದೊರೆ ನಿನ್ನ ನಾನ್ (ಎಷ್ಟು)

***

ಬಂದನೋ ನಂದನ ಕಂದ ಬಂದನೋ
ಕೃಷ್ಣಯ್ಯಾ ಮನೆಗೆ ಬಂದನೋ (ಬಂದನೋ)

ಬಂದ ನೋಡಿ ಮದನ ಕೋಟಿ
ಸುಂದರಾ ಕಾರ ಮೌಳಿ ವೃಂದ್ಯ
ವಂದ್ಯಾ ಮೃದು ಪಾದಾರವಿಂದ
ಗೋಪ ನಂದ ಮನೆಗೆ (ಬಂದನೋ)

ವಲ್ಲಬೇರಾ ಆಲಯಂಗಳಲ್ಲಿ
ಪೊಕ್ಕು ಪಾಲು ಬೆಣ್ಣೆ ಎಲ್ಲಾ
ಕದ್ದು ಲೂಟಿ ಗೆಯ್ದು ಬಲ್ಲಿದವರ ಭಾಗ್ಯನಿಧಿ (ಬಂದನೋ)

ಉಡುಪಿ ಮುಖಿಯರು ಉದಕದೊಳಾಡೇ
ಉಡುವ ಚೀರಗಳನೆ ಕದ್ದು ಗಿಡವನೇರಿ
ಮಡದಿಯರಲ್ಲಿ ದುಡುಗು ನೋಡಿದ
ಬಡವರೊಡೆಯ (ಬಂದನೋ)

ಶೇಷ ಶಯನ ನಿರ್ಜರ ಸಂತೋಷದಿಂದಾ

ಸಲಹಬಾಲಾ ವೇಷದಿಂದಾ

ನಾಮಗಿರಿ ವಿಭೂಷಣಾತ್ಮ ನರಹರಿ ದೊರೆ (ಬಂದನೋ)

***

ಆರತಿ ಬೆಳಗಿರೆ ಪಾರ್ವತಿಪತಿ

ಪರಮೇಶ್ವರಿಗೆ ಜೆಗದೀಶ್ವರಿಗೆ (ಆರತಿ)

ಸೇರುತ ಸತಿಯರು ಹೀರದ ತಟ್ಟೆಯೋಳ್

ಸೂರದಿ ಮುತ್ತು ರತ್ನವ ತುಂಬಿ (ಆರತಿ)

ಬಾಲೇ ಪಾರ್ವತಿಯ ತೊಡಮೇಲೇ ಇರುಸಿದ

ಬಾಲ ನೇತ್ರ ಶಿವಶಂಕರಗೆ

ಕಾಲನ ಜೆಯಿಸಿ ಬಾಲನ ಪೊರೆದ ನೀಲಕಂಠ

ನಿತ್ಯೋತ್ಸವಕೆ (ಆರತಿ)

ನಂದಿವಾಹನಕೆ ಚಂದ್ರಶೇಕರಗೆ

ಅಂದಕಾದರ ಸಂಹಾರನಿಗೆ ಮಂದಗಮನ

ರಾನಂದದಿ ಪಾಡುತ್ತ

ಚಂದದಿ ನರಹರಿ ಸೋದರರಿಗೆ (ಆರತಿ)

ಮಂಗಳ ಕರದಲಿ ಪೊತ್ತುತ ಮೋದದಿ

ಜಂಗಂಅರೂಪವ ಉದ್ಧರಿಸಿದಕೆ

ಮಂಗಳರೆಲ್ಲಾ ಸುಮಂಗಳ

ಪಾಡುತ್ತ ಬಂಗಾರದ ತಟ್ಟೆಯೊಳೀಗ (ಆರತಿ)

***

ಬಾದರಾಂಗಿ ಭೂಸುರಾಂಗಿ ಹೇ ಸರಸ್ವತಿ

ವಾಸುದೇವ ವಾಸಗೀತ ಪಾಹಿತಾನ್ ಹರೇ (ಬಾದರಾಂಗಿ)

ನಂದಗೋಪ ನಂದನಾಗ್ರಿ ನಂದನ ಪ್ರಿಯೇ

ವಂದಿಶೋಕ ವೃಂಗಹರೇ ಮಂದಹಾಸನೇ (ಬಾದರಾಂಗಿ)

ವಲ್ಲಬೀಷ ವಲ್ಲಬಾತ್ಮ ವಲ್ಲಗೀಶ್ವರಿ

ಪುಲ್ಲಜಾತಿ ಮಲ್ಲಿಕಾಸ ಮುಲ್ಲ ಸತ್ಕರೇ (ಬಾದರಾಂಗಿ)

ನೂತನಾಂಬು ಜಾನ ಶ್ರೀಸಮೇತ ಲೋಚನಿ
ಬೂತಗೀತ ಜಾತಸುಪ್ರೀತ ನರಹರೇ (ಬಾದರಾಂಗಿ)

***

ನಿನ್ನು ನೆರ ನಂಬಿದಿನಿ
ನಿಖಿಲ ಲೋಕ ಜನನಿ (ನಿನ್ನು)

ನನ್ನುಬ್ರೋವವೇ ತಲ್ಲಿ
ನಾಮಗಿರೇಶ್ವರಿ ಸನಕ ಸನಂದನ
ಸನ್ನುತ ಚರಿತ್ರಿಣಿ (ನಿನ್ನು)

ಪತಿತ ಪಾವನ ಮಹಾ ಪಾಪ ವಿಶೋಶಿನಿ
ಕ್ರುತ ಕರುಣಾ ಭಾಷಿಣಿ ಸೇವಕ ಪೋಷಿಣಿ
ಸ್ರುತಿ ಶಿರೋವಾನಿನಿ ಸುಖ ಮೃಧು
ಭಾಷಿಣಿ ನತ ಜನೋಧ್ಧಾರಿಣಿ
ನರಹರಿ ಪೋಷಿಣಿ (ನಿನ್ನು)

***

ಕಪಾಲ ಲೋಚನ ಕಪಾಲ ಶ್ರೀಹರ
ಶೈಲ ಲಾಡ್ವರ ಪಾನಕಪ್ರಿಯ ಬಾಲಬೋ
ಪರಿಪಾಲ ಯಾಗಿವ ಬಾಲಬೋ (ಕಪಾಲ)

ಮಂಗಳ ಪ್ರದು ತುಂಗ ಜಟರಾ
ಸಂಗಧಾತ್ರೇ ಭುಜಂಗ ಮಾರುತ ರಂಗಸನ್ಮುನಿ
ಪುಂಗ ವಾಂತರಾ ನಂಗ ನಿಜಪದ
ಪದಸಂಗ ವಿಗ್ರಹಿ ಪಂಗದಾ (ಕಪಾಲ)

ಸುರಕಲ ಸಂಹಾರ ಸೋದರ
ಧೀರ ಕಲ್ಪಿಹ ಘೋರ ಕವಿಜನ
ವಾರ ವಾಖ್ಯ ಸಂಚಾರ ನೈಜ

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ಕುಮಾರ ನರಹರಿ ಬೂರಿತಾ (ಕಪಾಲ)

***

ಕಮಲಾಲಯಾ ಕರುಣಾ ಕಟಾಕ್ಷಿ
ಕಮಲಾಯ ಜಾಶೀರ ಪಾಹಿಮಾಂ (ಕಮಲಾಲಯಾ)

ಸಿಂಧು ರಾಜಬಾಲೇ ಸೇವಕಾನುಕೂಲೇ
ಸುಂದರಾಂಗಿ ಮುಕುಂದ ಕೇಳಿ ಲೋಲೇ (ಕಮಲಾಲಯಾ)

ಸರಸಿಜಪಾಣಿ ವರದೇ ಪುರಾಣಿ
ವರ ಮಾಚ್ಚುತೇ ಕೀರ ಬೂಮ ಕಲ್ಯಾಣಿ (ಕಮಲಾಲಯಾ)

ಹೇಮಕಾಂತ ಕಾಯೇ ತಾಮರಸ ಪ್ರಮೇಯೇ
ನಾಮ ಶೈಲ ಶ್ರೀ ನರಹರಿಜಾಯೇ (ಕಮಲಾಲಯಾ)

***

ರಾಗ: ಮುಗಾರಿ

ಸರೋಜ ದಳ ನಯನಾ ಮಾಮವ ಶಿರೋಮಣಿ
ಸ್ತವ ಶ್ರೀಪದ ಯುಗಕೆ (ಸರೋಜ)

ನಂದಿ ತಾಸ್ಕುತ ಬ್ರುಂದ ಸುರಮುನಿ
ವಂದಿತ ಸರಸಿಜ ಸುಂದರ ಪದಯುಗ ಸಿಂದುಶಯನ
ಮುಚುಕುಂದ ವರ ಪ್ರದನೇ
ನಂದಗೋಪ ಪ್ರಿಯ ನಂದನ ಜೆಯಜೆಯ (ಸರೋಜ)

ರಂಗ ರಮಣ ವಿಹಂಗ ಮತಿರತ
ಭ್ರುಂಗನುಕುರಕುಲ ಸಂಗೀತ ಮಲ್ಲಿಕಾ
ಮಂಗಳ ವಿದರತು ಪಾಂಗ ವಿರಕ್ಷಣಗೆ
ಬಂಗರ ಹಿದಯತು ಪುಂಗವ ಜೆಯಜೆಯ (ಸರೋಜ)

ಸಾರಸಾನನ ಸೂರಿಲಾಲನ
ಶ್ರೀರಮಣಿ ಮುಖ ನೀರಜ ಮಧುಕರ ನೀರಜ

ನೀಲ ಸರೀರಸಿ ತುಂಬುರುಗೆ
ನಾರದನುತ ಶ್ರೀ ನರಹರಿ ಜೆಯಜೆಯ (ಸರೋಜ)

***

ನಂದಕುಮಾರಾ ನವನೀತ ಚೋರಾ (ನಂದ)

ರಂಗ್ಗಾ ವಿಹಾರಾ ಬಂಗವಿದೂರಾ
ಮಂಗಳಾ ಕಾರಾ ಮೌಕ್ತಿಕಹಾರಾ (ನಂದ)

ಮುಕು ನಕ ಬಾಲಾ ಮುರಳಿ ವಿಲೋಲಾ
ಸುಖನುತಲೀಲಾ ಶುಭಕರ ಶೀಲಾ (ನಂದ)

ಸುರವರ ಭೂಪಾ ಸುಗುಣ ಕಲಾಬಾ
ಪರಿಹೃುತ ತಾಪಾ ನರಹರೇ ರೂಪಾ (ನಂದ)

***

ಉಡಿಯ ತುಂಬಿರೇ ನಂಮಾ
ಉಡಿ ರಾಜ ವದನಕೆ ಮಡದಿ
ರುಕ್ಮಿಣಿ ದೇವಿಗೆ (ಉಡಿಯ)

ಬಡಲರೊಡಲ ನಂ ಬಂದು ಶ್ರೀಕೃಷ್ಣನ್ನ
ರಾಣಿ ಸುಸ್ರೋಣಿ ಮೃದು ವಾಣಿ
ಕಲ್ಯಾಣಿಗೆ (ಉಡಿಯ)

ಸ್ವಾಮಿ ಕೃಷ್ಣನ ಸದಾ
ಹೇಮ ಪೀಠದಿ ಮಧ್ಯ ನೇಮದಿ ಕುಳಿತಿಗಳು
ಭೂಮಿಯಾಳುವ ದಿವ್ಯ ಪುತ್ರನ್ನ ಪಡಿಯೆಂದು
ಕಾಮಿತಾರ್ತ್ಥವ ಹರಿಸಿ ನಾಮಗಿರಿ ನರಹರಿ ಕೋಮಳ (ಉಡಿಯ)

***

ರಾಗ: ಕೇದಾರ. ತಾಳ: ಆದಿ

ಜಯ ರಾಮಚಂದ್ರಾ ರಾಘವೇಂದ್ರಾ ಜಾನಕಿಪತೇ (ಜಯ)

ಸಮ ಸೀತಯಾ ನಮಸ್ತ್ವ ಕೋಟಿ ಮನ್ಮಥಾಕೃತೇ (ಜಯ)

ಭಾನುವಂಶ ಸಿಂಧುರಾಜ ಪೂರ್ಣಚಂದ್ರಾ
ವರ ಮೌಲಿಯಾ ಕಪಾವಣಾಬ್ದ ಕೀರ್ತಿಮಂದಿರಾ (ಜಯ)

ಮೈಥಿಲೇಂದ್ರಾ ಮಾನಿದೇಶ ಚಾಪಕಂಡನ
ಮೈಥಿಲಿ ವಿವಾಹ ಪೀಠ ಬದ್ರ ಮಂಡನ (ಜಯ)

ರಾವಣಪ ಕೇಶತೀಂದ್ರಾ ಮೇಧಿನವಿಭೋ
ಕುಲದೇವ ನಾಮಗಿರಿ ವಿಲೋಲ ನರಹರೇ ಪ್ರಭೋ (ಜಯ)

***

ಲಕ್ಷ್ಮಿದೇವಿಯ ಪೂಜಿಸ ಬಾರೇ ಸಖಿಯೇವರು (ಲಕ್ಷ್ಮಿ)

ಪಕ್ಷಿ ಧ್ವಜನ ಪಟ್ಟದರಸಿಗೆ ಅಕ್ಷಥೆ
ಪುಷ್ಪದಿಗಳ ಕೊಂಡು ಅಕ್ಷಯ ವರಗಳಳಿತ್ತು
ನಮ್ಮ ಕಟಾಕ್ಷ ವೀಕ್ಷಿಸಿ ರಕ್ಷಿಪೋ ಮಹಾ (ಲಕ್ಷ್ಮಿ)

ಚಾರು ಮತಿಗೆ ವಲಿದು ಬಂದು ಮಿಂಚಿ ನಿಂದದಲಿ
ಚಾರು ರೂಪಾದಿ ಹೊಳೆಯುತ ನಿಂದು ಕೋಮಳಿ ನಿನಗೆ
ಕೋರಿದ ವರಗಳ ಕೊಡುವನೆಂದು
ಚಾರುಮತಿಯ ಸುರ ಸಾರದಿಂದುಪಚಾರ ಸಹಿತವರ ಪೂಜೆಯ ಕೊಂಡು
ವಾರಿಜಮುಖಿಯೇ ವರಗಳಿತ್ತು ಕಾರುಣ್ಯದಲಿ ಸಲಹಿತ ಮಾತಾ (ಲಕ್ಷ್ಮಿ)

ಸ್ರಾವಣ ಶುಕ್ಲಪಕ್ಷದಲ್ಲಿ ಶುಕ್ರವಾರದಲಿ
ಪಾವಜ ಪಿತನ ಸಹ ಮೋದದಲಿ ಕ್ಷೀರಾಬ್ಧಿಯಿಂದ
ಶ್ರೀವಿಭೀಷಣನ ಭುಜದಿ ಕುಲ ತಂದದಲಿ
ಈವಸುಮತಿಗೆ ಬಂದು ಭಕ್ತರ ಸೇವೆಯ ಕೊಂಡು
ಶೀಘ್ರದಲವರಿಗೆ ದೇವ ಪುರದ ಭಾಗ್ಯಗಳನೆ ಕೊಟ್ಟು
ಯಾವದಿ ನಾಟ್ಯವ ನಾಡುತಿಹಳಾ (ಲಕ್ಷ್ಮಿ)

ಹೇಮಮಯವಾದ ಜಟ ಬಂಗಾರ ಬಿಂಜಿ ನಿಂತಲಿ

ಸ್ಥೋಮಾವಾಹಿವರ ಕಟಿಶ್ರುಂಗಾರ
ಕಂಠದೋಳ್ ರತ್ನಾ ಸ್ಥೋಮಾವಾಹಿವರಾ
ಮುತ್ತಿನ ಹಾರ (ಲಕ್ಷ್ಮಿ)

ವಾಮವಾದವತ ನೂಪುರಧ್ವನಿಯಾ
ವರ್ಣಿಸಲರಿಯನೇ ಪಾಣಿಗನಿಂದಾ
ಈ ಮಹಿವನಿಗೆ ನಿಂತು ಒಪ್ಪುವಾ
ನಾಮಗಿರೀಶನ ಮೋಹನ ರಾಣಿಶ್ರೀ (ಲಕ್ಷ್ಮಿ)

***

ರಾಗ: ಆನಂದ ಭೈರವಿ

ಜನನಿ ನಿನ್ನಯ ಪಾದ ಜಲಜ ಪೂಜಿಪೆ
ವಜನಾಕ್ಷಿ ನಾಮಗಿರಿ ಜನನಿ (ಜನನಿ)

ಸನಕಾದಿ ಸಕಲ ಸನ್ಮುನಿಜನ ವಿನುತ
ಮನ್ಮಥ ಕೇಳಿಕೆಯ ನಿಂತು ಮನ್ನಿಸಿ ಸಲಹೇ (ಜನನಿ)

ಕ್ಷೀರ ಸಾಗರಪುತ್ರಿ ಸಾರ ಸದನ ನೇತ್ರಿ
ಚಾರು ಚಂದ್ರ ವದನೇ
ಕಾರುಣ್ಯದಲಿ ನೀನು ವಾರರ ನೋಡದಿ ಕೋಟಿ
ಸರುವ ದಾರಿದ್ರವನ್ನಗಿದು ಶ್ರೀಧನ ದಾನವ ಕೊಡೆ (ಜನನಿ)

ನೀಲಕುಂತಲೆ ಕಮಲಾಲಯ
ದಟ ನಿಲಯೇ ಲಾಲಿತ ಕವಿ ವಚನೇ
ಬಾಲನ ಮೊರೆಯನು ಲಾಲಿಸಿ ಕರುಣದಿ
ಪಾಲಿಸೆನ್ನನು ದೇವಿ ಪದುಮವಾಸಿನಿ ಲೋಕ (ಜನನಿ)

ಕೋಮಳಾಂಗಿ ಮಾತೇ ಕೋಕಿಲ ಮೃದುವಾಣಿ
ಹೇಮ ನೂಪುರ ಚರಣೇ ನಾಮ ಕುಂಕುಮ
ಶೋಬಿತ ಸೋಮವದನೇ ಶ್ರೀ ನಾಮಗಿರಿಯ
ವಾಸ ಶ್ರೀ ನರಹರಿಪ್ರಿಯ ರಾಣಿ (ಜನನಿ)

***

ಬಾರೇ ಭೂವರ ಪುತ್ರಿ ಪಸುಪಂಕಜ ನೇತ್ರಿ
ಬಾರೇ ಸತ್ಗುಣ ಪಾತ್ರಿ ಬಾ ಬಾ ಮಗಾತ್ರಿ (ಬಾರೇ)

ಬಾರೇ ಕೋಕಿಲ ವೇಣಿ ಬಾ ಪಲ್ಲವ ಪಾಣಿ
ಬಾರೇ ಪನ್ನಂಗ ವೇಣಿ ಬಾ ಬಾ ಕಲ್ಯಾಣಿ (ಬಾರೇ)

ಕನಕದಾರುಣಿ ಕೆಜ್ಜೆ ಘನ ಬಂಡಗಳಿಟ್ಟ
ನಿನ್ನ ಕಾಲನು ತೋರೇ ಅರಿಸಿನವಾ ಹಚ್ಚುವೇನು (ಬಾರೇ)

ವಿಮಲಾಚಂದ್ರನ ಬಿಂಬ ಸಮವಾದ ನಿನ್ನ
ನಿನ್ನ ಸುಮುಖವ ತೋರೇ ಕುಂಕುಮ ಹಚ್ಚುವೇನು (ಬಾರೇ)

ಎಳಿಯಾ ಮಾವಿನ ದಿವ್ಯಾ ತಳಿಲಾನ ಪೋಲ್ವಾ
ಜಲಜಾಂಗರಿಗಳಿಗೆ ಜಾವಳವಾ ಹಚ್ಚುವೇನು (ಬಾರೇ)

ಸಂತತ ವಜ್ರ ಭೂಷಣಗಳಿಟ್ಟಿರುವಾ
ಅಂದಾದ ಕೈತೋರೇ ಗಂದ ಹಚ್ಚುವೇನು (ಬಾರೇ)

ಪುರುವೆ ಪುತ್ರಿಯೇ ನಿನ್ನ ಸಮವಾದ ನಿನ್ನ
ನಿನ್ನ ಸೆರಗಿನ ಮೇಲೇ ಬನ್ನಿರೆರಗುವೆ (ಬಾರೇ)

ಕಾಮಿನಿ ಮಣಿ ನಿನ್ನ ಕಡನೇ ಮಾಡಿದಾ ಬ್ರಹ್ಮ ಕಡನೇ
ಮಾಡಿದ ನಾಮಾದ್ರಿಯ ಶಯನನ್ನ ನಮಸ್ಕರಿಸಿ ಪ್ರಾರ್ತ್ತಿಸುವೆ (ಬಾರೇ)

***

ಬಾರೋ ಬಾರೋ ಮಾಧವನೇ ಬಾರೋ (ಬಾರೋ)

ಸೇತು ಮಾಧವನೇ ಬಾರೋ ಗೀತಾ ಮಾಧವನೇ
ಬಾರೋ ಪ್ರೀತಾ ಮಾಧವನೇ (ಬಾರೋ)

ಕಾಲು ಚರ ಗೆಜ್ಜೆರುಳಿ ಖಲ್ಲುಖಲ್ಲು
ಎನ್ನುತಲಿ ಬಾಲಕರ ನೋಡುತಲಿ

ಲೀಲೆಗಳ ತೋರುತಲಿ (ಬಾರೋ)

ಅಂಗದೈ ಮದ್ಯದಲಿ ಅಂಬೇಕಾಲು ನೀಗುತಲಿ
ಅಂಗನೇರಾ ಕಂಗಳಲ್ಲಿ
ಆನಂದ ತುಂಬುತಲಿ (ಬಾರೋ)

ಮುಂದಲೆಯ ಹೆರಳಿನಲ್ಲಿ
ಮುದ್ದು ಕೆಂಬು ಜೊಲಿಸುತಲಿ
ಅಂದವುಳ್ಳ ನೆಂದಿಯಲ್ಲಿ
ಅರಳೆಲೆ ಆಡುತಲಿ
ನರಹರಿ ನೋಡುತಲಿ (ಬಾರೋ)

***

ದೂರು ಮಾಡಲಿ ಬ್ಯಾಡಿರೋ ರಂಗೈಯನ ||ಪ

ದೂರ ಬ್ಯಾಡಿರೆಂದು ದುಷ್ಟ ಕುಮಾರನೆಂದು ||ಅಪ

ನಾನಿತ್ತ ಕೆಣೆ ಪಾಲನೆ ಪಟ್ಟಿಲೊಲಿಟ್ಟು ತಾನು ಆಡಲಿ
ಪೋದನೆ ಏನು ಅರಿಯಾದಗ್ದಾ ಎನ್ನಾ ಕಂದನ್ನ ನೀವು (ದೂರು)

ಎಲ್ಲಾರ ಮನೆಗ ಬಂದು ಬೆಣ್ಣೆಯ ತಿಂದು
ನಿಲ್ಲ ದೋಡಿದಾನೆಂದು ಒಳ್ಳೇ ಕೂಸಿನ ಮ್ಯಾಲೆ ಕಳ್ಳತನವನಿಟ್ಟು (ದೂರು)

ದೋಷವಿಲ್ಲವೆ ನಿಮಗೆ ಕಂದನೆ ದೊರೆ
ರೋಷ ಬಾರದೆ ಎನಗೆ ತ್ರೇಷ ತಿಂದೆನ್ನ ನಿರ್ದೋಷ ರಂಗೈಯ್ಯನ (ದೂರು)

ಮಕ್ಕಳ ಪಡದವರು ಈಪರಿಪರಾ
ಮಕ್ಕಳಾ ದೂರಲ್ಲಾರು ಅಕ್ರಮದಿಂದೆನ್ನ ಅರಗಿಣಿಯನಾ ನೀವು (ದೂರು)

ಅರಿಯಾದೆ ಕಳುಗಿದನೆ ನಿಮ್ಮನ ಗುಣ
ಅರಿತು ಕಳುಗಲಾರನೆ ವರಗುಣಶಾಲಿ ಶ್ರೀನರಹರಿ ದೊರೆಯೆನ್ನ (ದೂರು)

***

ಶ್ರೀ ನರಹರಿ ದಾಸರು ರಚಿಸಿದ ದೇವರನಾಮಗಳು

ಕಂದಾ ಬಾರೋ ಮುಕುಂದಾ ಬಾರೋ
ಸುಂದರ ವಿಗ್ರಹ ಗೋವಿಂದಾ ಬಾರೋ (ಕಂದಾ)

ನಿನ್ನ ಕಾಣದೆ ವೀದಿಯನ್ನು ಸುತ್ತಿ ಬಂದೆ
ಆಟ್ಟವನ್ನು ಬಿಟ್ಟು ಮನೆಗೆ
ಎನ್ನ ಚಿನ್ನಾ ಬಾರೋ (ಕಂದಾ)

ಎರಿವಾ ಮೊರೆ ತಪ್ಪಿತ್ತೆಂದು ಬೆರಸಿ ಬಿಸಿ
ನೀರು ಇಟ್ಟು ನಿನ್ನರಸುತ್ತಾ ಬಂದೇನು
ದೊರೆಯು ಬಾರೋ (ಕಂದಾ)

ತಪ್ಪಿತ್ತು ಉಂಬಾವೇಳೇ ತಾಳುವದೇ
ಎರದು ಬ್ಯಾಗ ತುಪ್ಪ ಅನ್ನ ಉಣುಸುವೆ
ಎನ್ನಪ್ಪಾ ಬಾರೋ (ಕಂದಾ)

ಉಣಿಸಿ ಹೀಗಳ್ ಇಟ್ಟು ಜಡೆ ಹೆಳದು
ಭೂಷನಿಟ್ಟಮ್ಯಾಲೆ ಕುಣಿದೋಡಿ
ಬರುವಿ ಸುರಗಿಣಿಯು ಬಾರೋ (ಕಂದಾ)

ಕಾಮಿನಿಯ ರೆಲ್ಲಾ ನಿನ್ನ
ಕಣ್ಣಿಟ್ಟು ಇರುವರೋ
ಶ್ರೀ ನಾಮಗಿರಿ ಪ್ರಿಯಾ ನರಹರಿಯು ಬಾರೋ (ಕಂದಾ)

***

ಯಾಕಳುವಿಯೋ ಕಂದಾ ಯಾರೆನಕ್ತರೋ
ನಿನ್ನ ನಾ ಕೇಳುವೆನೋ ಪೇಳೋ ರಂಗೈಯಾ (ಯಾಕೆ)

ಎನ್ನಲ್ಲಿ ಪೇಳೋ ಅವರ
ನಿನ್ನಯ್ಯಾ ನಲ್ಲಿ ಪೇಳಿ ಚನ್ನಾಗಿ
ಸಿಕ್ಷಿಪೇನೋ ರಂಗೈಯ್ಯಾ (ಯಾಕೆ)

ಸಂಜಿ ವೆಳೇಲಿ ಗೋವು ಸಹಿತಾ ನೀ
ಬರುವಾಗಾ ಅಂಜಿ ಕೊಂಡೇನೋ

ಮುದ್ದು ರಂಗೈಯ್ಯಾ (ಯಾಕೆ)

ಲೀಲೆ ಯೊಳಗ ನೀನು ಸೋಲಾದಿರಲು
ದುಷ್ಟ ಬಾಲರು ಬೊಯ್ದರೇನೋ
ರಂಗೈಯ್ಯಾ (ಯಾಕೆ)

ದುಟ್ಟಿತು ಬಾಡಿತು ಎಳ್ಳಿಷ್ಟು ಅತ್ತರ
ನಿನ್ನ ಹೊಟ್ಟೆ ತಂದಳಿ ಪೋದೋ
ರಂಗೈಯ್ಯಾ (ಯಾಕೆ)

ಅತ್ತತ್ತು ನಿನ್ನ ಮುದ್ದು ಅಂಗನು
ಬಾಡಿತ್ತಲ್ಲೋ ಎತ್ತಿ ಕೊಂಬೇನೋ
ಬಾರೋ ರಂಗೈಯ್ಯಾ (ಯಾಕೆ)

***

|| ಶ್ರೀ ಕೃಷ್ಣಾರ್ಪಣಮಸ್ತು ||